ಹಾಸನ ಡಿಸ್ಟ್ರಿಕ್ಟು.

4ನೇ ಜನವರೀ 1890ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ಸರ್ಕಾರದ ಆಜ್ಞೆಪ ಅನುಸರಿಸಿ ಕೆಳಗೆ ನಮೂದು ಮಾಡುವ ಈ ಡಿಸ್ಟ್ರಿಕ್ಟುಗಳ ಅನುಪಯೋಗವಾದ ರವಿನ್ಯೂ ರಿಕಾರ್ಡುಗಳು ನಾಶಪಡಿಸಲ್ಪಡುವವು.

ದಸ್ತೈವಜುಗಳು ದಾಖಲಾತುಗಳು ವಗೈರೆ ಪಡಿಯಲು ಅಪೇಕ್ಷೆವುಳ್ಳ ಕಕ್ಷಿಗಾರ್ರು ಈ ತಾರೀಖುಲಾಗಾಯಿತು 3 ತಿಂಗಳ ವ್ಯೊಳಗಾಗಿ ಆಯಾಯ ತಾಲ್ಲೂಕು ಅಮಲ್ದಾರ್‌ಗಳಲ್ಲಿ ಕೇಳಿಕೊಳ್ಳಬಹುದು.

1	ಹಾಸನ	2	ಮಂಜ್ಯಾಬಾದು
3	ಹೊಳೇನರಸೀಪುರ	4	ಬೇಲೂರು
5	ಅರಸೀಕೆರೆ	6	ಆರಕಲ್‌ಗೂಡು 7 ಚನ್ನರಾಯಪಟ್ಟ್ಣ

ಪಿ. ಯರ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.

ಫಾರೆಸ್ಟ್ ಇಲಾಖಾ.

ತಾರೀಖು 9ನೇ ಜನವರೀ 1890ನೇ ಇಸವಿ.

1878ನೇ ಇಸವಿ ಫಾರೆಸ್ಟ್ ರೂಲ್ಸ್ ಅನುಸರಿಸಿ ಇದರಡಿ ನಮೂದುಗುವ ಸರಕಾರ್ ಜಂಗಲ್‌ಗಳನ್ನು ಮತ್ತು ಪ್ಲಾಂಟೇಷ್ಣಗಳನ್ನು ಬಿಸಲು ಕಾಲಕ್ಕಾಗಿ 1890ನೇ ಇಸವಿ ಫಿಬ್ರವರಿ ಗುರ್ವೆ ಲಾಗಾಯಿತು ಮೇ ಅಖೈರುವರಿಗೆ ಬೇಟೆಗಾರರಿಗೂ ಯಿತರ ಜನಗಳಿಗೂ ಬಂದು ಮಾಡಲ್ಪಟ್ಟವೆ. ಶಿಕಾರಿಗೆ ಅತಿಕ್ರಮ ಪ್ರವೇಶ ಮಾಡತಕ್ಕವರು ಫ್ರಾಸಿಕ್ಯೂಷ್ಣಗೆ ವೊಳಪಡುವರು.

ನಂಬರ್.	ಪ್ಲಾಂಟೇಷ್ಣ ವ ಫಾರೆಸ್ಟ್ ಹೆಸರು.	ತಾಲ್ಲೂಕು.
1	ಬುರಡಾಳು ಬೋರೆಕಾವಲು ಮತ್ತು ಪ್ಲಾಂಟೇಷ್ಣ	ಹಾಸನ
2	ಬ್ಯಾಬಾ ಡಿಟೋ ಡಿಟೋ	ಡಿಟೋ
3	ಚಿಕ್ಕಬೆಟ್ಟ, ದೊಡ್ಡಬೆಟ್ಟ, ತವಗಮಲ್ಲಪ್ಪನ ಬೆಟ್ಟ, ಮತ್ತು ಕೊಡಗತವರೆಬೆಟ್ಟ ಫಾರೆಸ್ಟ್‌ಗಳು	ಡಿಟೋ
4	ದಗರೆಕಾವಲು ಫಾರೆಸ್ಟ್ ಮತ್ತು ಪ್ಲಾಂಟೇಷ್ಣ	ಬೇಲೂರು
5	ಕಬ್ಬಿನಾಲೆಗಾಲ್ ಫಾರೆಸ್ಟ್	ಮಂಜ್ಯಾಬಾದ
6	ಕೆಂಪಹೊಳೆ ಡಿಟೋ	ಡಿಟೋ
7	ಕಾಗನೇರಿಗಾಟೆ ಫಾರೆಸ್ಟ್	ಡಿಟೋ
8	ನಡಕೊಪ್ಪಲ್ ಯಿಲಾಚಿ ಪ್ಲಾಂಟೇಷ್ಣ	ಡಿಟೋ
9	ಬಿನಲಗಾಟೆ ಫಾರೆಸ್ಟ್	ಡಿಟೋ

ಮುದ್ದಪ್ಪ, ಸಬ್ ಅ|| ಕ್ವಸರ್‌ವೇಟರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 11ನೇ ಫಿಬ್ರವರೀ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಶಿವಮೊಗ್ಗ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸುವ ತಾಲ್ಲೂಕುಗಳಲ್ಲಿ ಇದಕ್ಕೆ ಲಗತ್ತಾಗಿರುವ ತಖ್ತೆಯಲ್ಲಿ ಕಂಡ ಫಾರೆಸ್ಟು ಪಸಾರೆ ಜಿನಸುಗಳು ಜಪ್ತಾಯಿಸತಕ್ಕ ಹಕ್ಕನ್ನು ಸ್ ೧೮೯೦ನೇ ಇಸವಿ ಏಪ್ರೆಲ್ ಗುರ್ವೇ ಲಾಗಾಯತು ಸ್ ೧೮೯೧ನೇ ಮಾರ್ಚಿ 31ರ ಮಿನಹು ಆಗುವ ಸಾಲ್ ವೊಂದಕ್ಕೆ ಆಯಾಯ ತಾಲ್ಲೂಕು ಕಸಬೆಯಲ್ಲಿ ಅಮಲ್ದಾರ್ ವ ಶಿರಸ್ತೇದಾರ್ರಿಂದ ಈ ಕೆಳಗೆ ನಮೂದ್ಮಾಡಿರುವ ತಾರೀಖುಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಂದ ಖಾಯಂ ಆಗತಕ್ಕ ಬಗ್ಯೆ ವಳಪಟ್ಟು ಹರಾಜ್ ಮಾಡಲ್ಪಡುತ್ತೆ.

1.	ಶಿವಮೊಗ್ಗಾ ತಾಲ್ಲೂಕು	ಸೋಮವಾರ	24ನೇ ಫಿಬ್ರವರಿ ಸ್ ೧೮೯೦
2.	ಚನ್ನಗಿರಿ ತಾಲ್ಲೂಕು	ಗುರುವಾರ	27ನೇ ಡಿಟೋ
3.	ಹೊನ್ನಾಳಿ ,,	ಶುಕ್ರವಾರ	7ನೇ ಮಾರ್ಚಿ 1890
4.	ಶಿಕಾರಿಪುರ ,,	ಮಂಗವಾರ	11ನೇ ಡಿಟೋ
5.	ಸೊರಬ ,,	ಶನಿವಾರ	15ನೇ ಡಿಟೋ
6.	ಸಾಗರ ,,	ಬುಧವಾರ	19ನೇ ಡಿಟೋ
7.	ನಗರ ,,	ಸೋಮವಾರ	24ನೇ ಡಿಟೋ
8.	ತೀರ್ಥಹಳ್ಳಿ ,,	ಶುಕ್ರವಾರ	28ನೇ ಡಿಟೋ

2. ಹರಾಜಿನಲ್ಲಿ ಹಕ್ಕನ್ನು ಪಡದುಕೊಂಡ ಪಡ ದರಖಾಸ್ತುದಾರನು ಆ ಕೂಡ್ಲೆ ವಟ್ಟು ಹರಾಜು ವೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ವೊಬಲಗನ್ನು ತೇವಣಾತಿ ಇಡಬೇಕಲ್ಲದೆ ತಾನು ಪಡದುಕೊಂಡ ಗುತ್ತಿಗೆಯನ್ನ ಸರಿಯಾಗಿ ನೆರವೇರಿಸತಕ್ಕ ಬಗ್ಯೆ ಸರಿಯಾದ ಖಾತರು ಜಾಮೀನನ್ನು ಕೊಡತಕ್ಕದ್ದು. ಈ ಷರತ್ತಿಗೆ ತಪ್ಪಿದ ಪಕ್ಷಕ್ಕೆ ಸರೀ ಯವನು ಪಡಕೊಂಡ ಕಂಟ್ರಾಕ್ಟ್‌ನ್ನು ಪುನಹ ಹರಾಜ್ ಮಾಡಲ್ಪಡುವದಲ್ಲದೆ ಅವಂದುಂಟಾಗುವ ಲುಕ್ಸಾನಿಗೆ ಅವನು ವಳಪಟ್ಟಿರತಕ್ಕದ್ದು.